ಭಾರತದ ಅಭಿವೃದ್ಧಿ ವಿಶ್ವದ ಅಭಿವೃದ್ಧಿ, ಭಾರತ ಹಣೆಬರಹ ಬದಲಾದರೆ ವಿಶ್ವದ ಹಣೆಬರಹ ನಿರ್ಧಾರವಾಗುತ್ತದೆ. ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ₹20 ಲಕ್ಷ ಕೋಟಿ ಪ್ಯಾಕೇಜ್ ಘೋಷಣೆ ಮಾಡಿದ್ದಾರೆ.
● **ನಳಿನ್ ಕುಮಾರ್ ಕಟೀಲ್** ಬಿಜೆಪಿ ರಾಜ್ಯಾಧ್ಯಕ್ಷ



# ತವರಿಗೆ ಕಳುಹಿಸುವಂತೆ ಸಿಡಿದೆದ್ದ ಕಾರ್ಮಿಕರು

## ಕಟ್ಟಡ ನಿರ್ಮಾಣ ಸಂಸ್ಥೆ ವಿರುದ್ಧ 700ಕ್ಕೂ ಅಧಿಕ ಕಾರ್ಮಿಕರ ಪ್ರತಿಭಟನೆ | ಕೂಡಿ ಹಾಕಿ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆಂಬ ಆರೋಪ

● **ಕನ್ನಡಪ್ರಭ ವಾರ್ತೆ** ಬೆಂಗಳೂರು

ತವರಿಗೆ ಕಳುಹಿಸದೆ ಬಲವಂತವಾಗಿ ಕೂಡಿ ಹಾಕಿ ಕಟ್ಟಡ ನಿರ್ಮಾಣದ ಕೆಲಸದಲ್ಲಿ ತೊಡಗಿಸಿದ್ದಾರೆ ಎಂದು ರಿಯಲ್ ಎಸ್ಟೇಟ್ ಕಂಪನಿ ವಿರುದ್ಧ ಆರೋಪಿಸಿದ ಸುಮಾರು 700ಕ್ಕೂ ಅಧಿಕ ವಲಸೆ ಕಾರ್ಮಿಕರು ಕಾಡುಗೋಡಿ ಸಮೀಪ ಸೋಮವಾರ ರಾತ್ರಿ ದಿಢೀರ್ ಪ್ರತಿಭಟನೆ ನಡೆಸಿದರು. ಕೂಡಲೇ ತಮ್ಮನ್ನು ಊರಿಗೆ ಕಳುಹಿಸುವಂತೆ ಆಗ್ರಹಿಸಿದರು.

ದೊಡ್ಡಬನಹಳ್ಳಿಯ ಸುಮಧುರ ಕನ್‌ಸ್ಟ್ರಕ್ಷನ್ ಸಂಸ್ಥೆಯ ಆವರಣದಲ್ಲಿ ವಲಸೆ ಕಾರ್ಮಿಕರು ಹರತಾಳ ನಡೆಸಿದ್ದು, ಈ ಪ್ರತಿಭಟನೆಗೆ ಮಣಿದ ಸಂಸ್ಥೆ ಕಾರ್ಮಿಕರನ್ನು ತಮ್ಮೂರಿಗೆ ಮರಳಲು ಮಂಗಳವಾರ ಅವಕಾಶ ನೀಡಿತು. ಪ್ರತಿಭಟನೆ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ನಿರ್ಮಾಣ ಸಂಸ್ಥೆ ವಿರುದ್ಧ ಟೀಕೆಗಳು ವ್ಯಕ್ತವಾಗಿವೆ.

ಸುಮಧುರ ಕನ್‌ಸ್ಟ್ರಕ್ಷನ್ ಸಂಸ್ಥೆಯಲ್ಲಿ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಹಾಗೂ ಬಿಹಾರ ಸೇರಿದಂತೆ ಹಲವು ರಾಜ್ಯಗಳ ಸುಮಾರು 700ಕ್ಕೂ ಹೆಚ್ಚಿನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಲಾಕ್‌ಡೌನ್ ಬಳಿಕ ಸ್ಥಗಿತಗೊಂಡಿದ್ದ ಸಂಸ್ಥೆಯ ಕಟ್ಟಡ ನಿರ್ಮಾಣ ಕಾಮಗಾರಿಗಳು ಸರ್ಕಾರ ಅನುಮತಿ ನೀಡಿದ ನಂತರ ಪುನಾರಂಭವಾಗಿದ್ದವು. ಆದರೆ ಕೆಲವರು ಕಾರ್ಮಿಕರು ಊರಿಗೆ ಹೋಗಲು ಮುಂದಾಗಿದ್ದರು. ಇದಕ್ಕೆ ಆ ಸಂಸ್ಥೆ ಆಕ್ಷೇಪ ವ್ಯಕ್ತಪಡಿಸಿ ಬಲವಂತವಾಗಿ ಅವರನ್ನು ಕೆಲಸಕ್ಕೆ ನಿಯೋಜಿಸಿತ್ತು ಎಂಬ ಆರೋಪಗಳು ಕೇಳಿಬಂದಿವೆ.

**ಕಾವಲುಗಾರರ ನೇಮಕ:** ಸಂಸ್ಥೆಯ ಆವರಣ ಬಿಟ್ಟು ಹೊರ ಹೋಗದಂತೆ ಕಾರ್ಮಿಕರಿಗೆ ತಾಕೀತು ಮಾಡಿದ್ದರು. ಅಲ್ಲದೆ, ಕೆಲಸಗಾರರ ಮೇಲೆ ನಿಗಾವಹಿಸಲು ಕಾವಲುಗಾರರನ್ನು ಸಂಸ್ಥೆ ನಿಯೋಜಿಸಿತ್ತು. ಈ ಬೆಳವಣಿಗೆಯಿಂದ ಬೇಸತ್ತ ಕಾರ್ಮಿಕರ, ಕೊರೋನಾ ಭೀತಿಯಿಂದ ಊರಿಗೆ ಮರಳಲು ಪಟ್ಟು ಹಿಡಿದಿದ್ದರು. ಪೊಲೀಸರ ಮಧ್ಯಪ್ರವೇಶ ಬಳಿಕ ವಲಸೆ ಹಕ್ಕಿಗಳು ಗೂಡಿಗೆ ಮರಳಲು ಅವಕಾಶ ಸಿಕ್ಕಿದೆ ಎಂದು ತಿಳಿದು ಬಂದಿದೆ.



### ಕಾರ್ಮಿಕರನ್ನು ಬಲವಂತವಾಗಿ ಕೂಡಿಟ್ಟಿಲ್ಲ: ಪೊಲೀಸರ ಸ್ಪಷ್ಟನೆ

ಸುಮಧುರ ನಿರ್ಮಾಣ ಸಂಸ್ಥೆಯವರು ಬಲವಂತವಾಗಿ ಕಾರ್ಮಿಕರನ್ನು ಕೂಡಿ ಹಾಕಿರಲಿಲ್ಲ. ತಮ್ಮ ಕೆಲಸಗಾರರಿಗೆ ವೇತನ ಸೇರಿದಂತೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿದ್ದರು. ಆದರೆ ಬೇರೆಡೆ ಕಾರ್ಮಿಕರು ಊರಿಗೆ ಮರಳುತ್ತಿರುವ ಕಾರಣ ಇಲ್ಲಿ ಕೆಲವರು ತವರಿಗೆ ಕಳುಹಿಸುವಂತೆ ಬೇಡಿಕೆ ಇಟ್ಟಿದ್ದರು. ಇದೇ ವಿಚಾರವಾಗಿ ಸೋಮವಾರ ರಾತ್ರಿ 8 ಗಂಟೆ ಸುಮಾರಿಗೆ ಕಾರ್ಮಿಕರ ಉಸ್ತುವಾರಿ ವ್ಯವಸ್ಥಾಪಕನ ಜತೆ ಜಟಾಪಟಿ ನಡೆದಿದೆ. ಆಗ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ಬಿಗಡಾಯಿಸಿತು. ತಕ್ಷಣವೇ ಮಾಹಿತಿ ಗೊತ್ತಾಗಿದೆ ಸ್ಥಳಕ್ಕೆ ತೆರಳಿ ಪರಿಸ್ಥಿತಿ ಶಾಂತಗೊಳಿಸಲಾಯಿತು. ಕಾರ್ಮಿಕರ ಮನವಿ ಒಪ್ಪಿದ ನಿರ್ಮಾಣ ಸಂಸ್ಥೆ, ಊರಿಗೆ ತೆರಳುವವರಿಗೆ ಅವಕಾಶ ಕಲ್ಪಿಸಿದರು ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

---

### ಸಣ್ ಸುದ್ದಿ

#### 44 ವಾರ್ಡ್‌ಗಳಲ್ಲಿ ತಂಬಾಕು ಉತ್ಪನ್ನ ಮಾರಾಟ ನಿಷೇಧ

**ಬೆಂಗಳೂರು:** ಕೊರೋನಾ ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಪೂರ್ವ ವಲಯದ 44 ವಾರ್ಡ್‌ಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಿ ಬಿಬಿಎಂಪಿ ಪೂರ್ವ ವಲಯದ ಜಂಟಿ ಆಯುಕ್ತರು ಆದೇಶಿಸಿದ್ದಾರೆ. ಪೂರ್ವ ವಲಯದ ಶಿವಾಜಿನಗರ ಸೇರಿದಂತೆ ವಿವಿಧ ಪ್ರದೇಶದಲ್ಲಿ ಕೊರೋನಾ ಸೋಂಕು ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ.ಸಾರ್ವಜನಿಕರು ಅಂಗಡಿ ಸೇರಿದಂತೆ ಇತರೆ ಮಾರಾಟ ಮಳಿಗೆಗಳ ಮುಂದೆ ಗುಂಪಾಗಿ ಸೇರಿ ತಂಬಾಕು ಉತ್ಪನ್ನಗಳ ಸೇವನೆ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಪೂರ್ವ ವಲಯದ 44 (ಹೆಬ್ಬಾಳ, ಪುಲಕೇಶಿನಗರ, ಶಿವಾಜಿನಗರ. ಸಿ.ವಿ.ರಾಮನ್‌ನಗರ, ಶಾಂತಿ ನಗರ, ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ) ವಾರ್ಡ್‌ಗಳಲ್ಲಿರುವ ಮಾರಾಟ ಮಳಿಗೆಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ತಂಬಾಕು ಉತ್ಪನ್ನವನ್ನು 'ಪ್ಯಾಕಿಂಗ್ ಪಾರ್ಸಲ್' ಮುಖಾಂತರ ನೀಡಬಹುದಾಗಿದೆ. ತಪ್ಪಿದಲ್ಲಿ ಉದ್ಯಮದ ಪರವಾನಗಿ ರದ್ದು ಪಡಿಸುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಿ ಪೂರ್ವ ವಲಯದ ಜಂಟಿ ಆಯುಕ್ತೆ ಪಲ್ಲವಿ ಆದೇಶಿಸಿದ್ದಾರೆ.

#### ಜೆ.ಸಿ.ರಸ್ತೆಯಲ್ಲಿ ವಾಹನ ಪಾರ್ಕಿಂಗ್ ನಿಷೇಧ?

**ಬೆಂಗಳೂರು:** ಅತ್ಯಧಿಕ ಸಂಚಾರಿ ದಟ್ಟಣೆ ಇರುವ ಜಯಚಾಮರಾಜೇಂದ್ರ ರಸ್ತೆಯ (ಜೆ.ಸಿ.ರಸ್ತೆ) ಎರಡು ಬದಿಯಲ್ಲಿ ವಾಹನ ನಿಲುಗಡೆ ನಿಷೇಧಿಸಲು ಬಿಬಿಎಂಪಿ ಚಿಂತನೆ ನಡೆಸಿದೆ. ಬಿಬಿಎಂಪಿ ಆಯುಕ್ತ ಬಿ.ಎಚ್. ಅನಿಲ್‌ಕುಮಾರ್, ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ ಗರುಡಾಚಾರ್ ಮಂಗಳವಾರ ಜೆ.ಸಿ.ರಸ್ತೆಯಲ್ಲಿರುವ ಬಹುಮಹಡಿ ಕಾರುಗಳ ಪಾರ್ಕಿಂಗ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮಿನರ್ವ ವೃತ್ತದಿಂದ ಪುರಭವನದವರೆಗಿನ ಜೆ.ಸಿ.ರಸ್ತೆಯ ಎರಡೂ ಬದಿಯಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸುವ ಕುರಿತು ಚರ್ಚಿಸಿದರು. ಇನ್ನು ಶಿಥಿಲಗೊಂಡಿರುವ ವಾಹನ ಪಾರ್ಕಿಂಗ್ ಕಟ್ಟಡವನ್ನು ಖಾಸಗಿ ಸಹಭಾಗಿತ್ವದಲ್ಲಿ ನವೀಕರಣ ಮಾಡುವಂತೆ ಬಿಬಿಎಂಪಿಗೆ ಸಲಹೆ ನೀಡಿದರು.

#### ಹೆಬ್ಬಾಳದ ಪುಷ್ಪ ಹರಾಜು ಕೇಂದ್ರ ಪುನರಾರಂಭ

**ಬೆಂಗಳೂರು:** ಲಾಕ್‌ಡಾನ್ ಸಂದರ್ಭದಲ್ಲಿ ಹೂವು ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಹೆಬ್ಬಾಳದ ಅಂತಾರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ (ಐಫ್ಯಾಬ್)ವನ್ನು ಪುನರಾರಂಭಿಸಲಾಗಿದೆ. ಕೊರೋನಾ ಸೋಂಕು ಹರಡದಂತೆ ಐಫ್ಯಾಬ್‌ನ ಎಲ್ಲ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ಪುನರಾರಂಭ ಮಾಡಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಕೋವಿಡ್‌ನ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರು ಸಂಕಷ್ಟಕ್ಕೆ ಒಳಗಾಗುವುದನ್ನು ತಡೆದು ರೈತರು ಬೆಳೆದ ಹೂವುಗಳನ್ನು ಮಾರಾಟ ಮಾಡಲು ಸರ್ಕಾರ ಆದೇಶಿಸಿರುವುದರಿಂದ ಹೂವಿನ ಗುಚ್ಛ ಹಾಗೂ ಇನ್ನಿತರ ಹೂವಿನ ವ್ಯಾಪಾರ ಕೈಗೊಳ್ಳಲು ಮೇ 8ರಿಂದ ಅವಕಾಶ ಕಲ್ಪಿಸಲಾಗಿದೆ. ರೈತರು, ರೈತ ಸಂಸ್ಥೆಗಳು, ಹೂವಿನ ವ್ಯಾಪಾರಿಗಳು ಸದುಪಯೋಗ ಪಡಿಸಿಕೊಳ್ಳುವಂತೆ ರಾಜ್ಯ ತೋಟಗಾರಿಕೆ ಇಲಾಖೆ ನಿರ್ದೇಶಕರು ಕೋರಿದ್ದಾರೆ.

---

# ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರ ಜತೆ ಇಂದು ಸಚಿವ ಶ್ರೀರಾಮುಲು ಸಭೆ

## ಕೊರೋನಾಗೆ ಸಂಬಂಧಿಸಿದಂತೆ ಆಸ್ಪತ್ರೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ಸಾಧ್ಯತೆ

● **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಸೋಂಕಿತರಿಗೆ ಅರಿಯದೆ ಚಿಕಿತ್ಸೆ ನೀಡಿದರೆ ಇಡೀ ಆಸ್ಪತ್ರೆ ಸೀಲ್‌ಡೌನ್ ಮಾಡಲಾಗುತ್ತಿದೆ. ಕೊರೋನಾ ಪರೀಕ್ಷೆ ನಡೆಯುವವರೆಗೆ ಚಿಕಿತ್ಸೆ ನೀಡದಿದ್ದರೆ ಆಸ್ಪತ್ರೆ ಮೇಲೆ ಕ್ರಮ ಕೈಗೊಳ್ಳುವುದಾಗಿ ಹೆದರಿಸಲಾಗುತ್ತಿದೆ ಎಂದು ಖಾಸಗಿ ಆಸ್ಪತ್ರೆಗಳು ಆರೋಗ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ.



ಅಲ್ಲದೆ, ಈ ಬಗ್ಗೆ ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದು, ಕೊರೋನಾ ಸೋಂಕಿತರಿಗೆ ಅರಿಯದೆ ಚಿಕಿತ್ಸೆ ನೀಡಿದರೆ ಸಂಬಂಧಪಟ್ಟ ವಾರ್ಡ್ ಅನ್ನು ಸ್ಥಗಿತಗೊಳಿಸಿ ಸೋಂಕು ನಿವಾರಕ ಕ್ರಮಗಳ ಬಳಿಕ ಪುನರ್ ಆರಂಭಕ್ಕೆ ಅನುಮತಿ ನೀಡಬೇಕು. ಇಡೀ ಆಸ್ಪತ್ರೆಯನ್ನು ಸೀಲ್‌ಡೌನ್ ಮಾಡ ಬಾರದು ಎಂದು ಮನವಿ ಸಲ್ಲಿಸಿದೆ.

ಇದರ ಬೆನ್ನಲ್ಲೇ ಬುಧವಾರ ಮಧ್ಯಾಹ್ನ 2 ಗಂಟೆಗೆ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರೊಂದಿಗೆ ಆರೋಗ್ಯ ಸಚಿವ ಬಿ. ಶ್ರೀರಾಮುಲು ವಿಡಿಯೋ ಸಂವಾದ ನಡೆಸಲು ಮುಂದಾಗಿದ್ದಾರೆ. ಈ ವೇಳೆ ತುರ್ತು ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ಬರುವ ಯಾವುದೇ ರೋಗಿಗೆ ಚಿಕಿತ್ಸೆ ನಿರಾಕರಿಸಬಾರದು.

ಯಾವ ರೀತಿಯಲ್ಲಿ ಚಿಕಿತ್ಸೆ ನೀಡಬೇಕು ಹಾಗೂ ಚಿಕಿತ್ಸೆ ನೀಡಿದ ರೋಗಿಗೆ ಕೊರೋನಾ ಸೋಂಕು ಇದ್ದದ್ದು ಸಾಬೀತಾದರೆ ಆಸ್ಪತ್ರೆ ಮುಂದೆ ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇದೆ.

ಮೂಲಗಳ ಪ್ರಕಾರ ಸೋಂಕಿತನಿಗೆ ಚಿಕಿತ್ಸೆ ನೀಡಿದ ಕೊರೋನೇತರ ಆಸ್ಪತ್ರೆಗಳಲ್ಲಿ ಸಂಬಂಧಪಟ್ಟ ವಾರ್ಡ್‌ಗಳನ್ನು ಮಾತ್ರ ಸೀಲ್‌ಡೌನ್ ಮಾಡಬೇಕು. ಉಳಿದ ಭಾಗದಲ್ಲಿ ಎಂದಿನಂತೆ ಆಸ್ಪತ್ರೆ ಕಾರ್ಯ ನಿರ್ವಹಿಸಬಹುದು ಎಂದು ಸೂಚನೆ ನೀಡುವ ಸಾಧ್ಯತೆ ಇದೆ.

### ಎಚ್ಚರಿಕೆ ನೀಡಿದ್ದ ಶ್ರೀರಾಮುಲು

ಜಯನಗರದ ಖಾಸಗಿ ಆಸ್ಪತ್ರೆಯಲ್ಲಿ ಮಹಿಳೆಯೊಬ್ಬರಿಗೆ ಚಿಕಿತ್ಸೆ ನಿರಾಕರಿಸಿದ್ದರಿಂದ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ದೂರಿದ್ದರು. ಈ ಬಗ್ಗೆ ತನಿಖೆಗೆ ಆದೇಶಿಸಿದ್ದ ಆರೋಗ್ಯ ಸಚಿವ ಶ್ರೀರಾಮುಲು, ಆಸ್ಪತ್ರೆಯ ತಪ್ಪು ಸಾಬೀತಾದರೆ ಆಸ್ಪತ್ರೆಯ ಪರವಾನಗಿ ರದ್ದುಪಡಿಸಲಾಗುವುದು. ಅಲ್ಲದೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದರು.

---

# ಹೋಟೆಲ್‌ಗಳಲ್ಲೇ ಊಟ, ತಿಂಡಿ

## ಕೇವಲ ಪಾರ್ಸಲ್ ನೀಡಬೇಕೆಂಬ ನಿಯಮ ಉಲ್ಲಂಘನೆ



● **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಲಾಕ್‌ಡೌನ್ ವಿನಾಯಿತಿ ಸಿಕ್ಕ ಬೆನ್ನಲ್ಲೆ ನಿಯಮ ಗಾಳಿಗೆ ತೂರಿ ನಗರದ ಅನೇಕ ಕಡೆಗಳಲ್ಲಿ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಟೀ,ಕಾಫಿ, ಊಟ, ಉಪಹಾರ ನೀಡಲಾಗುತ್ತಿದೆ.

ಕೊರೋನಾ ಸೋಂಕು ಹರಡುವ ಭೀತಿಯಿಂದ ಹೋಟೆಲ್‌ಗಳಲ್ಲಿ ಪಾರ್ಸಲ್‌ಗೆ ಮಾತ್ರ ಅವಕಾಶ ನೀಡಲಾಗಿದೆ. ಆದರೆ ಬಸವನಗುಡಿ ಸೇರಿದಂತೆ ನಗರದ ಹಲವಡೆ ಹೋಟೆಲ್ ಮಾಲೀಕರ ಸರ್ಕಾರದ ನಿಯಮ ಗಾಳಿಗೆ ತೂರಿ ಅಲ್ಲೇ ಊಟ, ತಿಂಡಿ ತಿನ್ನಲು ಅವಕಾಶ ಮಾಡಿಕೊಟ್ಟಿದ್ದಾರೆ. ಜನರು ಸಹ ಕೊರೋನಾ ಸೋಂಕಿನ ಭೀತಿ ಇಲ್ಲದೇ ರಸ್ತೆ ಬದಿಯಲ್ಲಿಯೇ ನಿಂತು ಟೀ, ಕಾಫಿ ಸೇವನೆ ಮಾಡುತ್ತಿರುವ ದೃಶ್ಯಗಳು ಸಾಮಾನ್ಯವಾಗಿ ಕಾಣಿಸುತ್ತಿವೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಪಿ.ಸಿ.ರಾವ್, ಹೋಟೆಲ್‌ಗಳಲ್ಲಿ ಊಟ, ಉಪಹಾರ ಪಾರ್ಸಲ್ ನೀಡಲು ಮಾತ್ರ ಅವಕಾಶ ನೀಡಲಾಗಿದೆ. ಹಾಲು ಉಳಿಯುತ್ತಿರುವ ಹಿನ್ನೆಲೆಯಲ್ಲಿ ಟೀ, ಕಾಫಿ ಹೋಟೆಲ್‌ಗಳಲ್ಲಿಯೇ ಪೂರೈಕೆಗೆ ಸರ್ಕಾರ ಅವಕಾಶ ನೀಡಿದೆ. ಆದರೆ, ಹೋಟೆಲ್ ಮಾಲೀಕರು ನಿಯಮ ಉಲ್ಲಂಘನೆ ಮಾಡಿರುವ ಬಗ್ಗೆ ಪರಿಶೀಲನೆ ಮಾಡಲಾಗುವುದು ಎಂದು 'ಕನ್ನಡಪ್ರಭ'ಕ್ಕೆ ತಿಳಿಸಿದರು.

---

# ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿದ್ರೂ ತಪಾಸಣೆ

● **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಸೋಂಕು ಭೀತಿ ಹಿನ್ನೆಲೆಯಲ್ಲಿ ಮನೆಗಳಿಗೆ ತೆರಳಿ ನಡೆಸುತ್ತಿರುವ ಆರೋಗ್ಯ ಸಮೀಕ್ಷೆ ವೇಳೆ, ಮತದಾರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೂ ಆರೋಗ್ಯ ಪರೀಕ್ಷೆ ನಡೆಸುವಂತೆ ನಿರ್ದೇಶನ ನೀಡಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಬಿ.ಎಚ್.ಅನಿಲ್‌ಕುಮಾರ್ ತಿಳಿಸಿದ್ದಾರೆ. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತೀವ್ರ ಉಸಿರಾಟ ತೊಂದರೆ (ಸಾರಿ) ಹಾಗೂ ಐಎಲ್‌ಐ (ಶೀತಜ್ವರ ಮಾದರಿ ಅನಾರೋಗ್ಯ) ಸಮಸ್ಯೆ ಹೊಂದಿರು ವವರು ಕೊರೋನಾ ಸೋಂಕಿಗೆ ತುತ್ತಾಗಿ ಹೆಚ್ಚು ಸಾವು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಮತದಾರರ ಪಟ್ಟಿ ಆಧರಿಸಿ ಮನೆ, ಮನೆಗೂ ಭೇಟಿ ನೀಡಿ ಆರೋಗ್ಯ ಸಮೀಕ್ಷೆ ನಡೆಸಲು ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ವಿಧಾನಸಭಾ ಕ್ಷೇತ್ರವಾರು ಮೇ 7ರಿಂದ 'ಹೆಲ್ತ್ ವಾಚ್' ಮೊಬೈಲ್ ಆ್ಯಪ್ ಬಳಸಿ ಸಮೀಕ್ಷೆ ನಡೆಸುತ್ತಿದೆ ಎಂದರು.

---

#### ಉದ್ಯೋಗ ತರಬೇತಿ

**ಬೆಂಗಳೂರು:** ಆರಿಶಿನಕುಂಟೆಯಲ್ಲಿರುವ ರುಡ್‌ಸೆಟ್ ಸಂಸ್ಥೆಯು ಲಾಕ್‌ಡೌನ್ ಮುಗಿದ ನಂತರ ಬೆಂಗಳೂರು ನಗರ, ಬೆಂ. ಗ್ರಾಮಾಂತರ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳ ನಿರುದ್ಯೋಗ ಯುವಕ-ಯುವತಿಯರಿಗೆ ಉಚಿತ ವಸತಿಯೊಂದಿಗೆ ಎಲೆಕ್ಟ್ರಾನಿಕಲ್ ಮೋಟರ್ ರೀವೈಂಡಿಂಗ್, ಮೊಬೈಲ್ ರಿಪೇರಿ, ಉದ್ಯಮಶೀಲತಾ ಅಭಿವೃದ್ಧಿ, ಬ್ಯೂಟಿ ಪಾರ್ಲರ್, ಟೈಲರಿಂಗ್ ಸೇರಿದಂತೆ 17 ವಿವಿಧ ಸ್ವಯಂ ಉದ್ಯೋಗ ತರಬೇತಿ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. 18 ರಿಂದ 45 ವರ್ಷದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ 080-27728166ಗೆ ಸಂಪರ್ಕಿಸಬಹುದಾಗಿದೆ.

---


## ನಮೂನೆ ಜಿ
## ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ

(2016 ರ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ನಿಯಂತ್ರಣಗಳು
(ಕಾರ್ಪೋರೇಟ್ ವ್ಯಕ್ತಿಗಳ ದಿವಾಳಿತನ ಪರಿಹಾರ ಪ್ರಕ್ರಿಯೆ) ಇದರ ನಿಯಂತ್ರಣ 36ಎ (1) ರಡಿ)

| | ಸಂಬಂಧಿತ ವಿವರಗಳು | |
|---|---|---|
| 1 | ಕಾರ್ಪೋರೇಟ್ ಸಾಲಗಾರನ ಹೆಸರು | **ಜೆಟ್ ಏರ್‌ವೇಸ್ (ಇಂಡಿಯಾ) ಲಿಮಿಟೆಡ್** |
| 2 | ಕಾರ್ಪೋರೇಟ್ ಸಾಲಗಾರ ಸಂಸ್ಥೆ ಸಂಯೋಜನೆಗೊಂಡ ದಿನಾಂಕ | 01 ಏಪ್ರಿಲ್ 1992 |
| 3 | ಕಾರ್ಪೋರೇಟ್ ಸಾಲಗಾರ ಸಂಯೋಜನೆಗೊಂಡ/ ನೋಂದಾಯಿತಗೊಂಡ ಪ್ರಾಧಿಕಾರ | ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ, ಆರ್‌ಒಸಿ- ಮುಂಬೈ |
| 4 | ಕಾರ್ಪೋರೇಟ್ ಐಡೆಂಟಿಟಿ ಸಂಖ್ಯೆ / ಕಾರ್ಪೋರೇಟ್ ಸಾಲಗಾರರ ಲಿಮಿಟೆಡ್ ಲಯಬಲಿಟಿ ಐಡೆಂಟಿಫಿಕೇಷನ್ ಸಂಖ್ಯೆ | L99999MH1992PLC066213 |
| 5 | ಕಾರ್ಪೋರೇಟ್ ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇರುವುದಾದರೆ)ಯ ವಿಳಾಸ | ನೋಂದಾಯಿತ ಕಛೇರಿ : ಸಿರೋಯ ಸೆಂಟರ್, ಸಹಾರ್ ಏರ್‌ಪೋರ್ಟ್ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400099. ಪ್ರಧಾನ ಕಛೇರಿ: ಜೆಟ್ ಏರ್‌ವೇಸ್ (ಇಂಡಿಯಾ) ಲಿಮಿಟೆಡ್, ಗ್ಲೋಬಲ್ ವನ್, 3ನೇ ಮಹಡಿ, 252, ಎಲ್‌ಬಿಎಸ್ ಮಾರ್ಗ್, ಕುರ್ಲಾ (ಪಶ್ಚಿಮ), ಮುಂಬೈ-400070 |
| 6 | ಕಾರ್ಪೋರೇಟ್ ಸಾಲಗಾರ ಸಂಸ್ಥೆಯ ದಿವಾಳಿತನ ಆರಂಭಗೊಂಡ ದಿನಾಂಕ | 20 ಜೂನ್ 2019 |
| 7 | ಆಸಕ್ತಿ ವ್ಯಕ್ತಪಡಿಸುವುದಕ್ಕೆ ಆಹ್ವಾನ ನೀಡಿದ ದಿನಾಂಕ | 13 ಮೇ 2020 (ರೌಂಡ್ 4) ಸುದ್ದಿ ಪತ್ರಿಕೆ ಜಾಹೀರಾತು ಪ್ರಕಟಿಸಲಾಗಿದೆ ಮತ್ತು ಕಂಪನಿ ವೆಬ್‌ಸೈಟ್‌ನಲ್ಲಿ ಅಪ್‌ಡೇಟ್ ಮಾಡಲಾಗಿದೆ. |
| 8 | ಕೋಡ್‌ನ 25(2)(ಎಚ್) ಕಲಂನಡಿ ದಿವಾಳಿತನ ಪರಿಹಾರ ಪ್ರಕ್ರಿಯೆಗೆ ಅರ್ಹತೆಯ ಮಾನದಂಡಗಳು ಲಭ್ಯವಾಗುವ ತಾಣ | **www.jetairways.com** ನಲ್ಲಿ ಲಭ್ಯವಾಗುವ ವಿವರವಾದ ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕ್ರಿಯೆ ದಾಖಲೆಯಲ್ಲಿ ಅರ್ಹತಾ ಮಾನದಂಡವನ್ನು ತಿಳಿಯಪಡಿಸಲಾಗಿರುತ್ತದೆ ಅಥವಾ **fly.JetAirways@in.gt.com** ಇಲ್ಲಿಗೆ ಇಮೇಲ್ ಮಾಡಿ ಪಡೆದುಕೊಳ್ಳಬಹುದಾಗಿದೆ |
| 9 | ಕಲಂ 29ಎ ನಂತೆ ಅನ್ವಯವಾಗುವ ಅನರ್ಹತಾ ಮಾನದಂಡಗಳು ಲಭ್ಯವಾಗುವ ತಾಣ | IBBI ಯವರ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (https://ibbi.gov.in/legal-framework/) ಅಥವಾ ಕೋರಿಕೆಯನ್ನು **fly.JetAirways@in.gt.com** ಗೆ ಕಳುಹಿಸಿ. |
| 10 | ಆಸಕ್ತಿ ವ್ಯಕ್ತಪಡಿಸುವ ಅರ್ಜಿ ಸ್ವೀಕಾರಕ್ಕೆ ಕೊನೆಯ ದಿನಾಂಕ | 28 ಮೇ 2020 |
| 11 | ದಿವಾಳಿತನ ಪರಿಹಾರ ಪ್ರಕ್ರಿಯೆಯ-ಸಂಭಾವ್ಯ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಹೊರಡಿಸುವ ದಿನಾಂಕ | 02 ಜೂನ್ 2020 |
| 12 | ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | 07 ಜೂನ್ 2020 |
| 13 | ದಿವಾಳಿತನ ಪರಿಹಾರ ಪ್ರಕ್ರಿಯೆಯ-ಸಂಭಾವ್ಯ ಅರ್ಜಿದಾರರ ಅಂತಿಮ ಪಟ್ಟಿ ಹೊರಡಿಸುವ ದಿನಾಂಕ | 10 ಜೂನ್ 2020 |
| 14 | ದಿವಾಳಿತನ ಪರಿಹಾರ ಪ್ರಕ್ರಿಯೆಯ ಸಂಭಾವ್ಯ ಅರ್ಜಿದಾರರಿಗೆ-ಮಾಹಿತಿ ಪತ್ರ, ಮೌಲ್ಯೀಕರಣ ಮ್ಯಾಟ್ರಿಕ್ಸ್, ಪರಿಹಾರ ಯೋಜನೆಗಳ ಕೋರಿಕೆಗಳನ್ನು ತಿಳಿಸುವ ದಿನಾಂಕ | 02 ಜೂನ್ 2020 |
| 15 | ಪರಿಹಾರ ಯೋಜನೆ, ಮೌಲ್ಯೀಕರಣ ಮ್ಯಾಟ್ರಿಕ್ಸ್ ಮತ್ತು ಮಾಹಿತಿ ಪತ್ರ ಮತ್ತು ಇತರ ಮಾಹಿತಿಯನ್ನು ಪಡೆಯುವ ರೀತಿ | ಅರ್ಹರಾದ ಸಂಭಾವ್ಯ ಪ್ರಕ್ರಿಯಾ ಅರ್ಜಿದಾರರೊಂದಿಗೆ ವಿದ್ಯುನ್ಮಾನ ರೀತಿಯಲ್ಲಿ ಹಂಚಿಕೊಳ್ಳಲಾಗುವುದು |
| 16 | ಪರಿಹಾರ ಯೋಜನೆ ಸಲ್ಲಿಸಲು ಕೊನೆಯ ದಿನಾಂಕ | 11 ಜುಲೈ 2020 |
| 17 | ಪರಿಹಾರ ಯೋಜನೆಯನ್ನು ಪರಿಹಾರ ಪ್ರಕ್ರಿಯಾ ವೃತ್ತಿದಾರ (Resolution Profesional)ರಿಗೆ ಸಲ್ಲಿಸಬಹುದಾದ ರೀತಿ | ಅಂಚೆ ಮೂಲಕ / ಖುದ್ದಾಗಿ ಮೊಹರಾದ ಲಕೋಟೆಯಲ್ಲಿ ಹಾಗೂ ಪೆನ್‌ಡ್ರೈವ್‌ನಲ್ಲಿ ಡಿಜಿಟಲ್ ಪ್ರತಿಯಾಗಿ ಪ್ರಕ್ರಿಯಾ ವೃತ್ತಿದಾರರಿಗೆ |
| 18 | ನಿರ್ಣಾಯಕ ಪ್ರಾಧಿಕಾರಕ್ಕೆ ಪರಿಹಾರ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸುವ ಸಂಭಾವ್ಯ ದಿನಾಂಕ | 23 ಜುಲೈ 2020 |
| 19 | ಪರಿಹಾರ ಪ್ರಕ್ರಿಯಾ ವೃತ್ತಿದಾರರ ಹೆಸರು ಮತ್ತು ನೋಂದಣಿ ಸಂಖ್ಯೆ | **ಆಶಿಶ್ ಚೌಚ್ಚರಿಯಾ** - IBBI/IPA001/IP-P00294/2017-18/10538 |
| 20 | ಮಂಡಳಿಯೊಂದಿಗೆ (IBBI) ನೋಂದಣಿಯಾಗಿರುವಂತೆ ಪರಿಹಾರ ಪ್ರಕ್ರಿಯಾ ವೃತ್ತಿದಾರನ ಹೆಸರು, ವಿಳಾಸ ಮತ್ತು ಇ-ಮೇಲ್ | **ಆಶಿಶ್ ಚೌಚ್ಚರಿಯಾ,** A: ಗ್ರ್ಯಾಂಟ್ ಥಾರ್ನ್‌ಟನ್ 10ಸಿ ಹಂಗರ್‌ಫೋರ್ಡ್ ಬೀದಿ, ಕೋಲ್ಕತ್ತಾ-700017, **E: ashish.chhawchharia@in.gt.com** |
| 21 | ಪರಿಹಾರ ಪ್ರಕ್ರಿಯಾ ವೃತ್ತಿದಾರನೊಂದಿಗೆ - ಪತ್ರ ವ್ಯವಹಾರ ನಡೆಸಲು ವಿಳಾಸ ಮತ್ತು ಇ-ಮೇಲ್ | ಜೆಟ್ ಏರ್‌ವೇಸ್ (ಇಂಡಿಯಾ) ಲಿಮಿಟೆಡ್, ಗ್ಲೋಬಲ್ ವನ್, 3ನೇ ಮಹಡಿ, 252, ಎಲ್‌ಬಿಎಸ್ ಮಾರ್ಗ್, ಕುರ್ಲಾ (ಪಶ್ಚಿಮ), ಮುಂಬೈ-400070, **E: fly.JetAirways@in.gt.com** |
| 22 | ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ | ಕಾರ್ಪೋರೇಟ್ ಸಾಲಗಾರ ವೆಬ್‌ಸೈಟ್ **www.jetairways.com** ನಲ್ಲಿ ಅಥವಾ ಕೋರಿಕೆಯನ್ನು **fly.JetAirways@in.gt.com** ಗೆ ಕಳುಹಿಸಿ ಪಡೆಯಬಹುದು |
| 23 | ಜಿ ನಮೂನೆ ಪ್ರಕಟವಾದ ದಿನಾಂಕ | 13 ಮೇ 2020 (ರೌಂಡ್ 4) |

ಸಹಿ/-
**ಆಶಿಶ್ ಚೌಚ್ಚರಿಯಾ,**
(IBBI/IPA-001/IP-P00294/2017-18/10538)
**ಪರಿಹಾರ ಪ್ರಕ್ರಿಯಾ ವೃತ್ತಿದಾರರು**
**ಜೆಟ್ ಏರ್‌ವೇಸ್ (ಇಂಡಿಯಾ) ಲಿಮಿಟೆಡ್ ಪರವಾಗಿ**
**E: RP.JetAirways@in.gt.com**
**ಐಬಿಬಿಐ ಜೊತೆಗಿನ ನೋಂದಾಯಿತ ವಿಳಾಸ ಮತ್ತು ಇಮೇಲ್ ಐಡಿ:**
ಗ್ರ್ಯಾಂಟ್ ಥಾರ್ನ್‌ಟನ್ 10ಸಿ ಹಂಗರ್‌ಫೋರ್ಡ್ ಬೀದಿ, ಕೋಲ್ಕತ್ತಾ-700017
**E: ashish.chhawchharia@in.gt.com**

**ದಿನಾಂಕ: ಮೇ 13, 2020**
**ಸ್ಥಳ : ಮುಂಬೈ**



**6ನೇ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ವಿ. ಲಲಿತಮ್ಮ**
ಮರಣ 13.05.2014
ರಾಮಗೊಂಡನಹಳ್ಳಿ, ವೈಟ್‌ಫೀಲ್ಡ್, ಬೆಂಗಳೂರು-66
ನೀವು ನಮ್ಮನ್ನಗಲಿ ಇಂದಿಗೆ
ಆರು ವರ್ಷವಾದರೂ ನಿಮ್ಮ ನೆನಪು
ಸದಾ ನಮ್ಮಲ್ಲಿ ಹಚ್ಚಹಸಿರಾಗಿ ಉಳಿದಿದೆ,
ನಿಮ್ಮ ಆದರ್ಶವೇ ನಮಗೆ ದಾರಿದೀಪ.
ನಿಮ್ಮ ಮಾರ್ಗದರ್ಶನವೇ ನಮ್ಮ ಜೀವನ.
ನಿಮ್ಮ ಆತ್ಮಕ್ಕೆ ಭಗವಂತನು
ಶಾಂತಿ ನೀಡಲಿ ಎಂದು ಪ್ರಾರ್ಥಿಸುವ
ಪತಿ- ಕೆ. ಅಂಜನಪ್ಪ,
ಮಗ- ಎ. ಶ್ರೀನಿವಾಸ, ಮಕ್ಕಳು,
ಮೊಮ್ಮಕ್ಕಳು ಮತ್ತು ಅಳಿಯಂದಿರು
ಹಾಗೂ ಬಂಧು-ಮಿತ್ರರು
ಮೊ: 9449658131



## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು-02




### ಪ್ರಿಯ ಆಸ್ತಿ ಮಾಲೀಕರೇ

- 2020-21ನೇ ಸಾಲಿನ ಆರ್ಥಿಕ ವರ್ಷವು ದಿನಾಂಕ: 01.04.2020 ರಿಂದ ಪ್ರಾರಂಭಗೊಂಡಿದ್ದು, ಆಸ್ತಿ ತೆರಿಗೆಯನ್ನು ಆನ್‌ಲೈನ್ ಅಥವಾ ಆಯ್ದ ಬ್ಯಾಂಕ್ ಶಾಖೆಗಳಲ್ಲಿ ಚಲನ್ ಪಡೆದು ಪಾವತಿಸಬಹುದಾಗಿರುತ್ತದೆ.
- ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಪಾಲಿಕೆಯ ಅಂತರ್ಜಾಲ **bbmptax.karnataka.gov.in** ದಲ್ಲಿ ಪಾವತಿಸಬಹುದಾಗಿರುತ್ತದೆ.
- 2020-21 ನೇ ಸಾಲಿನ ಸಂಪೂರ್ಣ ಆಸ್ತಿ ತೆರಿಗೆಯನ್ನು ದಿನಾಂಕ: 31.05.2020 ರೊಳಗಾಗಿ ಪಾವತಿಸಿದಲ್ಲಿ, **ಶೇ.5 ರಷ್ಟು ರಿಯಾಯಿತಿ** ಪಡೆಯಬಹುದಾಗಿರುತ್ತದೆ.
- ಡೆಬಿಟ್ ಕಾರ್ಡ್ ಮತ್ತು ಯುಪಿಐ ವಿಧಾನಗಳ ಮೂಲಕ ಆನ್‌ಲೈನ್‌ನಲ್ಲಿ ಆಸ್ತಿ ತೆರಿಗೆ ಪಾವತಿಸುವ ತೆರಿಗೆದಾರರಿಗೆ ಯಾವುದೇ ಅಧಿಕ ಶುಲ್ಕ ವಿಧಿಸುವುದಿಲ್ಲ.
- ಆಸ್ತಿ ತೆರಿಗೆಯನ್ನು ಕೆನರಾ ಬ್ಯಾಂಕ್, ಹೆಚ್‌ಡಿಎಫ್‌ಸಿ, ಐ.ಸಿ.ಐ.ಸಿ.ಐ ಮತ್ತು ಆಕ್ಸಿಸ್ ಬ್ಯಾಂಕ್‌ಗಳ ಆಯ್ದ ಶಾಖೆಗಳಲ್ಲಿ ಪಾವತಿಸಬಹುದಾಗಿರುತ್ತದೆ (ಆಯ್ದ ಬ್ಯಾಂಕ್ ಶಾಖೆಗಳ ವಿವರಗಳನ್ನು ಪಾಲಿಕೆಯ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿರುತ್ತದೆ).
- **ಸ್ವಯಂ ಘೋಷಣೆ ಆಸ್ತಿ ತೆರಿಗೆ** ಪದ್ಧತಿ ಅಡಿಯಲ್ಲಿ ಈವರೆಗೂ ಆಸ್ತಿ ತೆರಿಗೆ ಪಾವತಿಸದೇ ಇರುವ ತೆರಿಗೆದಾರರು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ (ಸಹಾಯಕ ಕಂದಾಯ ಅಧಿಕಾರಿಗಳ ವಿವರ ಮತ್ತು ದೂರವಾಣಿ ಸಂಖ್ಯೆಗಳ ವಿವರಗಳನ್ನು ಪಾಲಿಕೆಯು ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿರುತ್ತದೆ).

**ಎಂ. ಗೌತಮ್ ಕುಮಾರ್** ಮಹಾಪೌರರು | **ಬಿ.ಹೆಚ್. ಅನಿಲ್ ಕುಮಾರ್,** ಭಾ.ಆ.ಸೇ. ಆಯುಕ್ತರು

ಅಂತರ್ಜಾಲ: http://bbmp.gov.in ಸಹಾಯವಾಣಿ: 080-22660000

ಆಸ್ತಿ ತೆರಿಗೆ ಸಕಾಲಕ್ಕೆ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಕೈ ಜೋಡಿಸಿ!

"ಸಾರ್ವಜನಿಕ ಸ್ವತ್ತನ್ನು ಕಾಪಾಡಿಕೊಳ್ಳುವುದು; ಹಿಂಸೆಯನ್ನು ತೊರೆಯುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ